## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಕಾಮಗಾರಿಗೆ ಅನುದಾನವನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಸಕಇ 61 ಎಸ್ ಟಿ ಪಿ 2019, ದಿನಾಂಕ: 20.07.2019.

..............

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಪಂಗಡದವರಿಗೆ ವಿವಿಧ ಅಭಿವೃದ್ಧಿ ಯೋಜನೆಯಡಿ ಬಂಡವಾಳ ಲೆಕ್ಕ ಶೀರ್ಷಿಕೆ 4225-02-794-0-01 (059) ರಲ್ಲಿ ರೂ. 142.23 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿದ್ದು, ಮೊದಲನೇ ಮತ್ತು ಎರಡನೇ ಕಂತುಗಳಲ್ಲಿ ಒಟ್ಟಾರೆ ರೂ. 71.12 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಪರಿಶಿಷ್ಟ ವರ್ಗಗಳ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ ವಿವಿಧ ಶಾಸಕರುಗಳು ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಸಕಇ 143 ಎಸ್ ಟಿ ಪಿ 2019, ದಿನಾಂಕ:10.12.2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೆಳಕಂಡ ಮಾನ್ಯ ಶಾಸಕರುಗಳ ಕ್ಷೇತ್ರಗಳಿಗೆ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಈ ಕೆಳಕಂಡಂತೆ (ಒಟ್ಟು ರೂ. 1,595 ಲಕ್ಷಗಳು) ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರ. ಸಂ | ಮಾನ್ಯ ಶಾಸಕರ ಹೆಸರು | ಕ್ಷೇತ್ರದ ಹೆಸರು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | ಶ್ರೀ ಬೆಳ್ಳಿ ಪ್ರಕಾಶ್ | ಕಡೂರು | 50 |
| 2 | ಶ್ರೀ ಲಾಲಾಜಿ ಆರ್. ಮೆಂಡನ್ | ಕಾಪು | 50 |
| 3 | ಶ್ರೀ ಜಿ.ಟಿ.ದೇವೇಗೌಡ | ಚಾಮುಂಡೇಶ್ವರಿ | 50 |
| 4 | ಶ್ರೀ ನಳಿನ್ ಕುಮಾರ್ ಕಟೀಲ್, ಮಾನ್ಯ ಸದಸ್ಯರು | ದಕ್ಷಿಣ ಕನ್ನಡ | 50 |
| 5 | ಶ್ರೀ ಎನ್. ಮಹೇಶ್ | ಕೊಳ್ಳೇಗಾಲ | 50 |
| 6 | ಶ್ರೀ ರವೀಂದ್ರನಾಥ | ದಾವಣಗೆರೆ ಉತ್ತರ | 50 |
| 7 | ಶ್ರೀ ವೀರಣ್ಣ ಚರಂತಿಮಠ | ಬಾಗಲಕೋಟೆ | 50 |
| 8 | ಶ್ರೀ ದೊಡ್ಡನಗೌಡ ಜಿ. ಪಾಟೀಲ್ | ಹುನಗುಂದ | 50 |
| 9 | ಶ್ರೀ ಸಿದ್ದು ಸವದಿ | ತೇರದಾಳ | 50 |
| 10 | ಶ್ರೀ ಸಿದ್ದರಾಮಯ್ಯ | ಬಾದಾಮಿ | 50 |
| 11 | ಶ್ರೀ ಮುರುಗೇಶ್ ನಿರಾಣಿ | ಬೀಳಗಿ | 50 |
| 12 | ಶ್ರೀ ಗೋವಿಂದ ಎಂ ಕಾರಜೋಳ | ಮುಧೋಳ | 50 |
| 13 | ಶ್ರೀ ಸೋಮನಗೌಡ ಬಿ ಪಾಟೀಲ್ (ಸಾಸನೂರು) | ದೇವರ ಹಿಪ್ಪರಗಿ | 50 |
| 14 | ಎ.ಎಸ್. ಪಾಟೀಲ್ (ನಡಹಳ್ಳಿ) | ಮುದ್ದೇಬಿಹಾಳ | 50 |
| 15 | ವಿಜಯಪುರ ತಾಲ್ಲೂಕಿನ ಉತ್ನಾಳ್ ಗ್ರಾಮದಲ್ಲಿ ವಾಲ್ಮೀಕಿ ಭವನದ ನಿರ್ಮಾಣಕ್ಕೆ | | 20 |

--2

| | | | |
|---|---|---|---|
| 16 | ಶ್ರೀ ಬಸವರಾಜ್ ದಢೇಸೂಗೂರ್ | ಕನಕಗಿರಿ (ಕೊಪ್ಪಳ ಜಿಲ್ಲೆ) | 50 |
| 17 | ಶ್ರೀ ಆಚಾರ್ ಹಾಲಪ್ಪ ಬಸಪ್ಪ | ಯಲಬುರ್ಗಾ | 50 |
| 18 | ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ | ಗಂಗಾವತಿ | 50 |
| 19 | ಶ್ರೀ ವೆಂಕಟರೆಡ್ಡಿ ಮುದ್ನಾಳ್ | ಯಾದಗಿರಿ | 50 |
| 20 | ಶ್ರೀ ಎಂ.ಪಿ.ರೇಣುಕಾಚಾರ್ಯ | ಹೊನ್ನಾಳಿ | 50 |
| 21 | ಶ್ರೀ ಎಸ್.ವೈ.ಗೋಪಾಲಕೃಷ್ಣ | ಕೂಡ್ಲಿಗಿ | 50 |
| 22 | ಶ್ರೀ ಪಿ.ಟಿ.ಪರಮೇಶ್ವರ ನಾಯಕ್ | ಹೂವಿನಹಡಗಲಿ | 50 |
| 23 | ಶ್ರೀ ಕೆ. ಶಿವನಗೌಡ ನಾಯಕ್ | ದೇವದುರ್ಗ | 50 |
| 24 | ಶ್ರೀ ದತ್ತಾತ್ರೇಯ ಶ್ರೀ ಪಾಟೀಲ್ ರೇವೂರು (ಅಪ್ಪುಗೌಡ) | ಕಲಬುರಗಿ ದಕ್ಷಿಣ | 50 |
| 25 | ಶ್ರೀ ರಾಜ್ ಕುಮಾರ್ ಪಾಟೀಲ್ | ಸೇಡಂ | 50 |
| 26 | ಶ್ರೀ ಬಸವರಾಜ್ ಮತ್ತಿಮೂಡ್ | ಕಲಬುರಗಿ ಗ್ರಾಮೀಣ | 50 |
| 27 | ಶ್ರೀ ಬಿ.ಶ್ರೀರಾಮುಲು | ಮೊಳಕಾಲ್ಮೂರು | 50 |
| 28 | ಶ್ರೀ ಎ.ನಾರಾಯಣಸ್ವಾಮಿ ಮಾನ್ಯ ಸಂಸದರು | ಚಿತ್ರದುರ್ಗ | 50 |
| 29 | ಶ್ರೀಮತಿ ಜಯಮ್ಮ ಬಾಲರಾಜು, ಮಾನ್ಯ ವಿಧಾನಪರಿಷತ್ ಸದಸ್ಯರು | | 25 |
| 30 | ಶ್ರೀ ಕೆ.ಜಿ.ಬೋಪಯ್ಯ | ವಿರಾಜ್ ಪೇಟೆ | 50 |
| 31 | ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ | ಕುಂದಾಪುರ | 50 |
| 32 | ಶ್ರೀ ಎಂ.ಪಿ.ಕುಮಾರಸ್ವಾಮಿ | ಮೂಡಗೆರೆ | 50 |
| 33 | ಶ್ರೀ ರಾಜಅಮರೇಶ್ವರ ನಾಯಕ್, ಮಾನ್ಯ ಸಂಸದರು | ರಾಯಚೂರು | 50 |
| ಒಟ್ಟು (ಒಂದು ಸಾವಿರದ ಐದು ನೂರ ತೊಂಬತ್ತೈದು ಲಕ್ಷಗಳು ಮಾತ್ರ) | | 1,595 ಲಕ್ಷಗಳು | |

**ಷರತ್ತುಗಳು:**

1. ಮಾನ್ಯ ಲೋಕಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಕೈಗೆತ್ತಿಕೊಳ್ಳುವುದು.
2. ಜಿಲ್ಲಾಧಿಕಾರಿಗಳಿಗೆ ನೀಡಿರುವ ಆರ್ಥಿಕ ಅಧಿಕಾರದ ಮಿತಿಯಲ್ಲಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಈ ಮೂಲಕ ಅಧಿಕಾರ ನೀಡಲಾಗಿದೆ.
3. ಸದರಿ ಕಾಲೋನಿಗಳಲ್ಲಿ ಪ್ರಗತಿ ಕಾಲೋನಿ ಸೇರಿ ಈಗಾಗಲೇ ಕಲ್ಪಿಸಿರುವ ಮೂಲಭೂತ ಸೌಕರ್ಯಗಳನ್ನು ಹೊರತುಪಡಿಸಿ, ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಮಾತ್ರ ಕೈಗೆತ್ತಿಕೊಳ್ಳುವುದು.
4. ಕಾಮಗಾರಿಯ ಗುಣಮಟ್ಟ ಕಾಪಾಡಲು ಮೂರನೇ ಪಾರ್ಟಿಯಿಂದ ತಪಾಸಣೆ ನಡೆಸತಕ್ಕದ್ದು.
5. ಬಿಡುಗಡೆ ಮಾಡಿರುವ ಅನುದಾನಕ್ಕೆ ಕಾಮಗಾರಿ ಪೂರ್ಣಗೊಂಡ ಬಗ್ಗೆ ಉಪಯೋಗಿತ ಪ್ರಮಾಣ ಪತ್ರವನ್ನು ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.
6. ಪ್ರಗತಿ ಕಾಲೋನಿ ಯೋಜನೆ ಅಡಿಯಲ್ಲಿ ಗುರ್ತಿಸಲಾದ ಕಾಲೋನಿಗಳ ಪಟ್ಟಿಯನ್ನು ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ತಿಳಿಸತಕ್ಕದ್ದು.
7. ಕಾಲೋನಿಗಳಲ್ಲಿ ತೆಗೆದುಕೊಳ್ಳುವ ಕಾಮಗಾರಿಗಳನ್ನು ತಪ್ಪದೇ ಜಿಯೋ ಟ್ಯಾಗ್ (Geo-tagged) ಮಾಡಿಸುವುದು.
8. ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸುವುದು.



CamScanner

9. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಜಲ ಸಂಪನ್ಮೂಲ ಇಲಾಖೆಗಳಿಂದ ಸಿ.ಸಿ ರಸ್ತೆ, ಒಳಚರಂಡಿ, ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಲಾಗುತ್ತಿರುವುದರಿಂದ ಅದೇ ಕಾಮಗಾರಿಗಳನ್ನು ಈ ಅನುದಾನದಿಂದ ತೆಗೆದುಕೊಳ್ಳಬಾರದು.
10. ಸರ್ಕಾರದ ಮಾರ್ಗಸೂಚಿಗಳನ್ವಯ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವುದು.
11. ಸದರಿ ಅನುದಾನವನ್ನು 2019-20ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಪಂಗಡದವರಿಗೆ ವಿವಿಧ ಅಭಿವೃದ್ಧಿ ಯೋಜನೆಯಡಿ ಬಂಡವಾಳ ಲೆಕ್ಕ ಶೀರ್ಷಿಕೆ 4225-02-794-0-01 (059) ರಲ್ಲಿನ ಅನುದಾನದಲ್ಲಿ ಭರಿಸತಕ್ಕದ್ದು.

ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜಶ್ರೀ ಹೆಚ್.ಕುಲಕರ್ಣಿ),
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

**ಪ್ರತಿಗಳು:**

1. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

********

CamScanner